# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ರವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ:-**

ಕೋಲಿ, ಕಬ್ಬಲಿಗ, ಬೆಸ್ತರನ್ನು ಎಸ್.ಟಿ.ಗೆ ಸೇರಿಸುವ ಪ್ರಸ್ತಾವನೆಯು ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ಪುನ: ಬಂದಿದ್ದು ಕೇಂದ್ರ ಕೋರಿರುವ ಮಾಹಿತಿಯೊಂದಿಗೆ ಕಡತವನ್ನು ಶೀಘ್ರವಾಗಿ ಕೇಂದ್ರಕ್ಕೆ ಕಳುಹಿಸಿ ನಮ್ಮ ಸಮಾಜದ ಬಹುದಿನದ ಈ ಬೇಡಿಕೆ ಈಡೇರಿಸಲು ಆದ್ಯತೆಯ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರದ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:-** ರಾಜ್ಯದಲ್ಲಿನ ಗಂಗಾಮತ ಮತ್ತು ಅದರ ಪರ್ಯಾಯ ಪದಗಳನ್ನು (ಕೋಲಿ, ಕಬ್ಬಲಿಗ, ಬೆಸ್ತ ಒಳಗೊಂಡಂತೆ) ರಾಜ್ಯದ ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಲು ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಮೂಲಕ ಕುಲಶಾಸ್ತ್ರೀಯ ಅಧ್ಯಯನ ಮಾಡಿಸಿ ರಾಜ್ಯ . ಸರ್ಕಾರದ ಶಿಫಾರಸ್ಸಿನೊಂದಿಗೆ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ನವದೆಹಲಿ ಇವರಿಗೆ ಸರ್ಕಾರದ ಪತ್ರ ಸಂಖ್ಯೆ: ಎಸ್ ಡಬ್ಲೂಡಿ 200 ಎಸ್ಎಡಿ 2011, ದಿನಾಂಕ:03/03/2014 ರಲ್ಲಿ ಪ್ರಸ್ತಾವನೆ ಕಳುಹಿಸಲಾಗಿತ್ತು.

ಆದರೆ ರಿಜಿಸ್ಟ್ರಾರ್ ಜನರಲ್ ಅಂಡ್ ಸೆನ್ಸಸ್ ಕಮೀಷನರ್, ಭಾರತ ಸರ್ಕಾರದ ಗೃಹ ಮಂತ್ರಾಲಯ ಇವರು ಕರ್ನಾಟಕ ಸರ್ಕಾರದ ಪ್ರಸ್ತಾವನೆಗೆ ಬೆಂಬಲಿಸಿರುವುದಿಲ್ಲವೆಂದು ಭಾರತ ಸರ್ಕಾರದ ಬುಡಕಟ್ಟು ಮಂತ್ರಾಲಯದಿಂದ ದಿನಾಂಕ: 22.08.2016 ರಂದು ಕರ್ನಾಟಕ ಸರ್ಕಾರಕ್ಕೆ ತಿಳಿಸಿದ್ದ ಹಿನ್ನಲೆಯಲ್ಲಿ . ಹೆಚ್ಚಿನ ಸಮರ್ಥನೆಗಳನ್ನು ನೀಡಿ, ದಿನಾಂಕ:08.02.2017ರಂದು ಭಾರತ ಸರ್ಕಾರಕ್ಕೆ ಪತ್ರ ಬರೆದು ಮರು ಪರಿಗಣಿಸುವಂತೆ ಕೋರಲಾಗಿತ್ತು.

ಆದರೆ ಎರಡನೇ ಬಾರಿಯೂ ಸಹ ಗಂಗಾಮತ ಮತ್ತು ಅದರ ಪರ್ಯಾಯ ಪದಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಿರುತ್ತಾರೆ ಈ ಕುರಿತು ವಿವರವಾದ ಸಮರ್ಥನೆಗಳೊಂದಿಗೆ ದಿನಾಂಕ:16.02.2018 ರಂದು ಭಾರತ ಸರ್ಕಾರದ ಬುಡಕಟ್ಟು ಮಂತ್ರಾಲಯಕ್ಕೆ ಮತ್ತೊಮ್ಮೆ ಪತ್ರ ಬರೆದು ರಾಜ್ಯ ಸರ್ಕಾರದ ಶಿಫಾರಸ್ಸನ್ನು ಅನುಮೋದಿಸಲು ಕೋರಲಾಗಿತ್ತು.

ಮುಂದುವರೆದು, ಅಖಿಲ ಕರ್ನಾಟಕ ಅಂಬಿಗರ ಚೌಡಯ್ಯ ಮಹಾಸಭಾ ಇವರ ಮನವಿ ಮೇಲೆ ಹೆಚ್ಚುವರಿ ಸಮರ್ಥನೆ ಮತ್ತು ಸಾಕ್ಷ್ಯಾಧಾರಗಳನ್ನು ಒದಗಿಸಲು ಭಾರತ ಸರ್ಕಾರವು ದಿನಾಂಕ:05.10.2018 ರಂದು ತಿಳಿಸಿದ್ದು, ಅದರಂತೆ ಪ್ರಕರಣದಲ್ಲಿ ಹೆಚ್ಚುವರಿಯಾಗಿ ಸಮರ್ಥನೆ ಮತ್ತು ದಾಖಲೆಗಳನ್ನು ದಿನಾಂಕ:12.07.2019 ರಂದು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿತ್ತು ನಂತರ ಈ ಸಂಬಂಧ ನಿರ್ದೇಶಕರು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಇವರಿಂದ ಹೆಚ್ಚುವರಿ/ಪರಿಷ್ಕೃತ ಮಾಹಿತಿ/ದಾಖಲೆಗಳನ್ನು ಪಡೆದು ದಿನಾಂಕ: 02-02-2021ರ ಪತ್ರದಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು.

ಪ್ರಸ್ತುತ ಆಫೀಸ್ ಆಫ್ ದಿ ರಿಜಿಸ್ಟ್ರಾರ್ ಜನರಲ್ ಆಪ್ ಇಂಡಿಯಾ (ORGI) ರವರ ದಿನಾಂಕ 31.10.2023 ರ ಪತ್ರದಲ್ಲಿ ಸದರಿ ಸಮುದಾಯಗಳನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸುವ ಪ್ರಸ್ತಾವನೆಯನ್ನು ಮತ್ತೊಮ್ಮೆ ತಿರಸ್ಕರಿಸಿರುತ್ತಾರೆ. ಸದರಿ ಸಮುದಾಯವನ್ನು ಪರಿಶಿಷ್ಟ ಪಂಗಡ ಪಟ್ಟಿಗೆ ಸೇರಿಸಲು ಸೂಕ್ತ ಸಮಜಾಯಿಷಿಗಳೊಂದಿಗೆ ಹಲವಾರು ಬಾರಿ ರಾಜ್ಯ ಸರ್ಕಾರ ಶಿಫಾರಸ್ಸು ಮಾಡಿದ್ದರೂ ಕೇಂದ್ರ ಸರ್ಕಾರದ ಆಫೀಸ್ ಆಫ್ ದಿ ರಿಜಿಸ್ಟ್ರಾರ್ ಜನರಲ್ ಆಪ್ ಇಂಡಿಯಾ (ORGI) ರವರು ಪ್ರಸ್ತಾವನೆಯನ್ನು ಬೆಂಬಲಿಸಿರುವುದಿಲ್ಲ.

**ಸಂಖ್ಯೆ**: STW/SECB/SAD/104/2024

( **ಸಿದ್ದರಾಮಯ್ಯ** )
ಮುಖ್ಯಮಂತ್ರಿ